ದಿನಾಂಕಃ 10.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ನಾನು ಬಿ.ಎ ಪಧವೀಧರೆ. ದಾವಾ ಸ್ವತ್ತು ಎಸ್.ಎಂ.ಕೃಷ್ಣಮೂರ್ತಿ ಲೇಔಟ್ ನಲ್ಲಿ ಇರುತ್ತದೆ. ದಾವಾ ಸ್ವತ್ತಿನ ಅಸ್‌ಸಮೆಂಟ್ 3172/31. ದಾವಾ ಸ್ವತ್ತು 39/2 ಸರ್ವೆ ನಂಬರ್ ನಲ್ಲಿ ಇರುತ್ತದೆ. ಸರ್ವೆ ನಂಬರ್ 39/2 ಯಾವಾಗ ಭೂಪರಿವರ್ತನೆ ಆದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಲೇಔಟ್ ಕಚ್ಛಾ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ನಿವೇಶನ ಸಂಖ್ಯೆ 39/2. ದಾವಾ ಸ್ವತ್ತಿನ ಚಕ್ಕು ಬಂದಿ ಪೂರ್ವಕ್ಕೆಃ ಬುಕ್ಕಾಪಟ್ಟಣ ರಸ್ತೆ, ಪಶ್ಚಿಮಕ್ಕೆಃಚಂಗಪುಟ್ಟಪ್ಪನವರ ನಿವೇಶ, ಉತ್ತರಕ್ಕೆಃಗೊತ್ತಿಲ್ಲ ದಕ್ಷಿಣಕ್ಕೆಃ ನಾರಾಯಣಪ್ಪನವರ ನಿವೇಶನ. ದಾವಾ ಸ್ವತ್ತಿನ ದಕ್ಷಿಣಕ್ಕೆ ಇರುವ ನಾರಾಯಣಪ್ಪನವರು ಯಾರಿಗೆ ಮಾರಾಟ ಮಾಡಿದರು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ಸರ್ವೆ ನಂಬರ್ 39/2ರಲ್ಲಿ ಹೊನ್ನೂರಪ್ಪನರ ಲೇಔಟ್ ಎಂದರೆ ಸರಿ. ನಾರಾಯಣಪ್ಪ ಮತ್ತು ಎಸ್.ಎಂ. ಕೃಷ್ಣಮೂರ್ತಿಯವರು ಸಹೋದರರು ಎಂದರೆ ನನಗೆ ಗೊತ್ತಿಲ್ಲ. 1960ರಲ್ಲಿ ನಾರಾಯಣ್ಣಪ್ಪನವರು ಸರ್ವೆ ನಂಬರ್ 39/2ನ್ನು ಹೊನ್ನೂರಪ್ಪನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1963-64ರಲ್ಲಿ ಹೊನ್ನೂರಪ್ಪನವರು ಸರ್ವೆ ನಂಬರ್ 39/2ನ್ನು ಭೂಪರಿವರ್ತನೆ ಮಾಡಿದರು ಎಂದರೆ ಸರಿ. ಸರ್ವೆ ನಂಬರ್ 39/2ರ ಮಧ್ಯಭಾಗದಲ್ಲಿ ರಸ್ತೆಯಿಂದ ಅಕ್ಕ ಪಕ್ಕ ನಿವೇಶನಗಳು ಇವೆ ಎಂದರೆ ಸರಿ. ಸದರಿ ಲೇಔಟ್ ನಲ್ಲಿ ನಿವೇಶನ ಸಂಖ್ಯೆ 1 ಮತ್ತು 10ನ್ನು ಪ್ರತಿವಾದಿಗಳು ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅಜ್ಜಿಯವರ ಹೆಸರು ವಿಜಯಮ್ಮ. ನಮ್ಮ ಅಜ್ಜಿಯವರು ಇದೇ ಪ್ರತಿವಾದಿಗಳ ಮೇಲೆ O.S.No.217/2008ರಂತೆ ದಾವೆಯನ್ನು ಊಡಿದ್ದು ಸದರಿ ದಾವೆ ಡಿಕ್ರಿ ಯಾಗಿತ್ತು ಎಂದರೆ ಸರಿ. ಸದರಿ ಡಿಕ್ರಿಯಲ್ಲಿ ದಕ್ಷಿಣಕ್ಕೆ ಹೊನ್ನೂರಪ್ಪನವರ ಲೇಔಟ್ ಎಂದರೆ ಸರಿ. ಹೊನ್ನೂರಪ್ಪನವರ ಲೇಔಟ್ ನಲ್ಲಿ ನಿವೇಶನ ಸಂಖ್ಯೆ 10ನ್ನು ಪ್ರತಿವಾದಿಗಳು ಖರೀದಿಸಿದ್ದು ವಾಸವಿದ್ದರು ಎಂದರೆ ಸರಿ. O.S.No.217/2008ರ ಆದೇಶದ ವಿರುದ್ಧ ಅಫೀಲನ್ನು ಸಲ್ಲಿಸಲಾಗಿದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳ ನಿವೇಶನ ಸಂಖ್ಯೆ 10ರಲ್ಲಿ 20X40 ವಿಸ್ತೀರ್ಣ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾಗದಲ್ಲಿ ಪ್ರತಿವಾದಿಗಳು ಕಟ್ಟಡವನ್ನು ಕಟ್ಟಿಕೊಂಡು ಕಾಂಫೌಂಡ್ ಹಾಕಿದ್ದಾರೆ ಎಂದರೆ

ಸಾಕ್ಷಿ ಕೇವಲ ಒಂದು ಶೆಡ್ಡು ಇದೆ ಎಂದು ನುಡಿದಿರುತ್ತಾರೆ. ಸದರಿ ಸ್ವತ್ತಿನಲ್ಲಿ ಪ್ರತಿವಾದಿಗಳು ಸರ್ಕಾರದಿಂದ ಅನುಮತಿ ಪಡೆದು ಕಟ್ಟಡ ಕಟ್ಟುವಾಗ ನಾವು ತೊಂದರೆಯನ್ನು ಮಾಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ದಾವಾ ಸ್ವತ್ತಿನ ವಿಸ್ತೀರ್ಣ ಮತ್ತು ಅದರ ಸ್ಥಳ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. 39/2ದಾವಾ ಸ್ವತ್ತಿನ ನಿವೇಶನ ಸಂಖ್ಯೆ ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಎಲ್ಲಾ ವಿಚಾರಗಳು ನಮ್ಮ ತಾಯಿಯವರಿಗೆ ಗೊತ್ತಿರುತ್ತದೆ. ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವತ್ತಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.